
# ಸನಾತನ ಧರ್ಮ ಮತ್ತು ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು

ಎದುರ್ಕಳ ಕೆ. ಶಂಕರನಾರಾಯಣ ಭಟ್



### ಸನಾತನ ಧರ್ಮದ ಹಿರಿಮೆ

**ಭಾ**ರತೀಯ ಸಂಜಾತವಾದ ಸನಾತನ ಧರ್ಮವು ಹಿಂದೂಧರ್ಮ ಎಂಬ ಹೆಸರಿನಿಂದ ವಿಶ್ವವಿಖ್ಯಾತವಾಗಿದ್ದು ಜಗತ್ತಿನ ಧರ್ಮಗಳಲ್ಲೆಲ್ಲ ಅತ್ಯಂತ ಪ್ರಾಚೀನವಾಗಿರುತ್ತದೆ. ದೇವರು–ಮಾನವ–ಜಗತ್ತು ಮತ್ತು ಜೀವನಕ್ಕೆ ಸಂಬಂಧಿಸಿದಂತೆ ತತ್ತ್ವ ಹಾಗೂ ಅನುಭವದ ಸಾಧನಾವಿವರಗಳನ್ನು ಸನಾತನ ಧರ್ಮವು ಒಳಗೊಂಡಿದೆ. ಮಾನವನ ಲೌಕಿಕ ಹಾಗೂ ಪಾರಮಾರ್ಥಿಕವಾದ ಸಮಗ್ರ ಚಿಂತನ ಮಂಥನಗಳಿಗೆ ಅವಕಾಶ ಕೊಟ್ಟಿರುವುದು ಹಾಗೂ ಜೀವನದ ಸಮಸ್ಯೆಗಳಿಗೆ ಪರಿಹಾರಗಳನ್ನು ಸರ್ವ ಜನಾಂಗದವರೂ ಕಾಣಬಹುದು ಎನ್ನುವ ಆಶ್ವಾಸನೆ ಸನಾತನ ಹಿಂದೂಧರ್ಮದ ವೈಶಿಷ್ಟ್ಯವಾಗಿದೆ. ಸಹಸ್ರ ಸಹಸ್ರ ಸಂವತ್ಸರಗಳ ಹಿಂದೆ ವೇದಕಾಲದಲ್ಲಿ ಮಹಾತಪಸ್ವಿಗಳಾಗಿದ್ದ ಪ್ರಾಚೀನ ಮಹರ್ಷಿಗಳು ತಮ್ಮ ಅಂತರಂಗದ ದಿವ್ಯ ಧ್ಯಾನದಲ್ಲಿ ಕಂಡುಕೊಂಡ ಆಧ್ಯಾತ್ಮಿಕ ಬೆಳಕೇ ವಾಙ್ಮಯ ರೂಪದಲ್ಲಿ, ಸನಾತನ ಧರ್ಮದ ತತ್ತ್ವ ಹಾಗೂ ಅನುಷ್ಠಾನ ವಿವರಗಳಾಗಿ ಮೂಡಿಬಂದಿವೆ. ಸನಾತನ ಧರ್ಮವು ಹೆಸರಿಗೆ ತಕ್ಕಂತೆ ನಿತ್ಯನೂತನವೂ ಶಾಶ್ವತವೂ ಆದ ಧರ್ಮವಾಗಿ, ಪೀಳಿಗೆಯಿಂದ ಪೀಳಿಗೆಗೆ ಬೆಳಗುತ್ತ ಬಂದು, ಮಾನವನ ಜೀವನದ ದಿವ್ಯತೆ ಹಾಗೂ ಭವ್ಯತೆಯ ಪ್ರಕಾಶಕ್ಕೆ ನೆರವಾಗುತ್ತಾ ಸಾಗಿ ಬಂದಿರುತ್ತದೆ. ಅದರಂತೆ ಸನಾತನ ಹಿಂದೂಧರ್ಮದ ಹರಿಕಾರರಾಗಿ ಸಹಸ್ರಾರು ಸಂತರು, ಅನೇಕ ಆಚಾರ್ಯ ಸ್ವಾಮಿಗಳು, ಅವತಾರ ಮಹಾಪುರುಷರು ಕಾಲಕಾಲಕ್ಕೆ ಸರಿಯಾಗಿ ನಮ್ಮೀ ಪುಣ್ಯಭೂಮಿ ಭರತಖಂಡದಲ್ಲಿ ಮೂಡಿ ಬಂದು ಭವ್ಯವಾಗಿ ಬೆಳಗಿರುತ್ತಾರೆ. ಈ ನಿಟ್ಟಿನಲ್ಲಿ ವಿಶ್ವಾಮಿತ್ರ, ಕಶ್ಯಪ, ವಸಿಷ್ಠ, ಗೌತಮ, ಭರದ್ವಾಜ ಮೊದಲಾದ ಮಹರ್ಷಿಗಳು, ಗಾರ್ಗಿ, ಮೈತ್ರೇಯಿ ಮುಂತಾದ ಬ್ರಹ್ಮವಾದಿನಿಯರು, ಶ್ರೀರಾಮ, ಶ್ರೀಕೃಷ್ಣ ಎಂಬಿತ್ಯಾದಿ ಅವತಾರ ಮಹಾಪುರುಷರು, ಶ್ರೀಶಂಕರಾಚಾರ್ಯ, ಶ್ರೀರಾಮಾನುಜಾಚಾರ್ಯ, ಶ್ರೀಮಧ್ವಾಚಾರ್ಯ ಮುಂತಾದ ಆಚಾರ್ಯರು ವಿಖ್ಯಾತರಾಗಿರುತ್ತಾರೆ. ಹಾಗೆಯೇ ಆಧುನಿಕ ಕಾಲದಲ್ಲಿ, ಸನಾತನ ಧರ್ಮದ ದಿವ್ಯ ಸಂದೇಶ ಪ್ರಕಾಶಕರಾಗಿ ಮೂಡಿ ಬಂದ ಪುಣ್ಯಚೇತನಗಳಲ್ಲಿ ಶ್ರೀಕೃಷ್ಣಚೈತನ್ಯ, ಗೋಸ್ವಾಮಿ ತುಳಸಿದಾಸರು, ಸಂತ ಪುರಂದರದಾಸರು, ಸಂತ ಶ್ರೀತ್ಯಾಗರಾಜ ಸ್ವಾಮಿಗಳು ಮೊದಲಾದವರು ಸ್ಮರಣೀಯರಾಗಿರುತ್ತಾರೆ. ಇವರ ನಂತರದಲ್ಲಿ ಆಧುನಿಕ ಕಾಲದಲ್ಲಿ ಅನೇಕ ಮಹಾಪುರುಷರು, ಸಂತ ಮಹಾತ್ಮರು ಭಾರತದಲ್ಲಿ ಅವತರಿಸಿರುತ್ತಾರೆ. ಇವರೆಲ್ಲರ ಗುಂಪಿನಲ್ಲಿ ಸನಾತನಧರ್ಮದ ತತ್ತ್ವ–ಅನುಷ್ಠಾನದ ವಿಚಾರಗಳನ್ನು ಸಮಗ್ರವಾಗಿ ಅನುಸರಿಸಿ ತಪಸ್ಸಾಧನೆಗೈದು ಪೂರ್ಣಸಿದ್ಧಿಯನ್ನು ಹೊಂದಿ, ಮನುಕುಲದ ಸರ್ವಾಂಗೀಣ ಕಲ್ಯಾಣಕ್ಕಾಗಿ ಆಧ್ಯಾತ್ಮಿಕ ನೆಲೆಯಿಂದ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದವರಲ್ಲಿ ಅಗ್ರಮಾನ್ಯರಾಗಿ ಶ್ರೀರಾಮಕೃಷ್ಣ ಪರಮಹಂಸರು ಮೆರೆಯುತ್ತಾರೆ.

ಶ್ರೀರಾಮಕೃಷ್ಣರು ಸನಾತನ ಧರ್ಮದ ಜೀವಂತ ನಿದರ್ಶನ. ಆಧುನಿಕ ಕಾಲದಲ್ಲಿ ಋಷಿಮುನಿಗಳ ಬಾಳನ್ನು ಬಾಳಿದ ಮಹನೀಯರು ಅವರು. ಹೀಗಾಗಿ ಸನಾತನ ಧರ್ಮಕ್ಕೂ ಅವರಿಗೂ ಅವ್ಯಾಜ ಸಂಬಂಧ. ಇದನ್ನು ಶಾಸ್ತ್ರಬದ್ಧವಾಗಿ, ಸುಲಲಿತವಾಗಿ ನಿರೂಪಿಸಿರುವ ಮಾನ್ಯ ಲೇಖಕರು ಕನ್ನಡದ ಹೆಸರಾಂತ ಲೇಖಕರು. ಅವರ 'ಹಿಂದೂಧರ್ಮದ ಪರಿಚಯ' ಪುಸ್ತಕ ಅತ್ಯಂತ ಮನ್ನಣೆ ಪಡೆದಿದೆ. ಇನ್ನಿತರ ಗ್ರಂಥಗಳನ್ನೂ ರಚಿಸಿರುವ ಇವರು ಆಶ್ರಮದ ಭಕ್ತರು.

### ಸನಾತನ ಧರ್ಮದಲ್ಲಿ ದೇವರ ಕಲ್ಪನೆ

ಸನಾತನ ಧರ್ಮಕ್ಕೆ ಅತಿ ಪುರಾತನವಾದ ಪರಂಪರೆ ಇದೆ. ಇಂತಹ ವಿಶಿಷ್ಟ ಪರಂಪರೆಯ ಸನಾತನ ಹಿಂದೂ ಧರ್ಮವನ್ನು ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು ಇಳೆಯಲ್ಲಿನ ತಮ್ಮ ಅವತಾರ ಜೀವನದ ಒಟ್ಟು ಐವತ್ತು ವರ್ಷಗಳ ಪುಟ್ಟ ಕಾಲಾವಧಿಯಲ್ಲಿ ಪೂರ್ಣವಾಗಿ ಅನುಷ್ಠಾನ ಮಾಡಿ,

> ರಾಮಕೃಷ್ಣ–ವಿವೇಕಾನಂದ ಸಂಪ್ರದಾಯವು ಭಾರತದ ಚಿರಂತನ ತತ್ತ್ವಶಾಸ್ತ್ರದಲ್ಲಿ ಬೇರೂರಿದೆ. ಸತ್ಯ ಒಂದೇ, ತಿಳಿದವರು ಇದನ್ನು ವಿವಿಧ ಹೆಸರುಗಳಿಂದ ಕರೆಯುವರು– ಇದು ವೈದಿಕ ದೃಷ್ಟಿ. ಈ ದೃಷ್ಟಿಯು ಉಪನಿಷತ್ತುಗಳು ಮತ್ತು ಭಗವದ್ಗೀತೆಗಳಲ್ಲಿ ಮುಂದುವರಿದುಕೊಂಡು ಬಂದಿತು. ಹಾಗೆಯೇ ಈ ದೃಷ್ಟಿಯು ಮಧ್ಯಕಾಲೀನ ಯುಗದ ಮಹಾತ್ಮರಿಂದ ಹಿಡಿದು, ಹತ್ತೊಂಬತ್ತನೆಯ ಶತಮಾನದ ಸಂತ ಶ್ರೀರಾಮಕೃಷ್ಣರವರೆಗೆ ಉಳಿದುಕೊಂಡು ಬಂದಿದೆ. **– ಅಮಿಯಾ ಚಕ್ರವರ್ತಿ**

ಸಿದ್ಧಿಯನ್ನು ಹೊಂದಿ, ಸನಾತನ ಧರ್ಮವು ಸತ್ಯ ಹಾಗೂ ನಿತ್ಯನೂತನ ಎನ್ನುವುದನ್ನು ತಮ್ಮ ದಿವ್ಯಜೀವನ ಮತ್ತು ಸಂದೇಶಗಳ ಮೂಲಕ ಲೋಕಕ್ಕೆ ಸ್ಪಷ್ಟಪಡಿಸಿರುತ್ತಾರೆ.

ಸನಾತನ ಹಿಂದೂಧರ್ಮದ ದೇವರು ಎಂದರೆ ಸರ್ವ ಶಕ್ತನು, ಸರ್ವಜ್ಞನು, ಸರ್ವಾಂತರ್ಯಾಮಿ ಹಾಗೂ ಸರ್ವ ವ್ಯಾಪಕನೂ ಆಗಿರುತ್ತಾನೆ. ಅದರಂತೆ ಹಿಂದೂಶಾಸ್ತ್ರ ಗ್ರಂಥಗಳಲ್ಲಿ ದೇವರೆಂದರೆ

**ಯತೋ ವಾ ಇಮಾನಿ ಭೂತಾನಿ ಜಾಯಂತೇ**
**ಯೇನ ಜಾತಾನಿ ಜೀವಂತಿ, ಯತ್ ಪ್ರಯಂತ್ಯಭಿಸಂವಿಶಂತಿ**
**ತದ್ ವಿಜಿಜ್ಞಾಸಸ್ವ, ತದ್ ಬ್ರಹ್ಮೇತಿ**

(ತೈತ್ತಿರೀಯೋಪನಿಷತ್ತು, ಭೃಗುವಲ್ಲಿ, ಮೊದಲನೆಯ ಅನುವಾಕ)

"ಯಾವುದರಿಂದ ಈ ಜೀವಿಗಳು ಜನಿಸುವುವೋ, ಹಾಗೆಯೇ ಹುಟ್ಟಿರುವವುಗಳು ಯಾವುದರಿಂದ ಜೀವಿಸುತ್ತವೆಯೋ ಮತ್ತು ನಾಶವಾಗುವ ಕಾಲದಲ್ಲಿ, ಯಾವುದರಲ್ಲಿ ಸೇರುವುವೋ ಅದನ್ನು ಅರಿತುಕೋ, ಅದು ಬ್ರಹ್ಮ" ಎಂಬುದಾಗಿ ಹೇಳಲಾಗಿದ್ದು, ಅಂತಹ ಪರಮಾತ್ಮನು ಶ್ರದ್ಧಾವಂತ ಭಕ್ತರಿಗೆ ದರ್ಶನ, ಸ್ಪರ್ಶನ, ಸಂಭಾಷಣೆಗೆ ಲಭ್ಯನು ಎಂದು ಸ್ಪಷ್ಟಪಡಿಸಲಾಗಿದೆ. ಇಷ್ಟೇ ಅಲ್ಲದೆ, ದೇವರು ಒಬ್ಬನೇ, ಅವನಿಗೆ ನಾಮಗಳು ಅನೇಕ – **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** (ಋಗ್ವೇದ ೧–೧೬೪–೪೬) ಎಂದರೆ ಇರುವ ಸತ್ಯ – ದೇವರು ಒಬ್ಬನೇ, ಜ್ಞಾನಿಗಳು ಅವನನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ ಎಂಬುದಾಗಿ ಋಗ್ವೇದದಲ್ಲಿ ತಿಳಿಸಲಾಗಿದೆ. ಹಾಗೆಯೇ ಮತಧರ್ಮಗಳ ವಿಚಾರವಾಗಿ ಸಮನ್ವಯ ಸಂದೇಶವನ್ನು ಅತ್ಯಂತ ನಿರ್ಣಾಯಕವಾಗಿ ಸನಾತನ ಹಿಂದೂಧರ್ಮದಲ್ಲಿ ವ್ಯಕ್ತಗೊಳಿಸಲಾಗಿದ್ದು, ತತ್ಸಂಬಂಧವಾದ ದಿವ್ಯ ನುಡಿ ಇಂತಿದೆ:

**ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ।**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥**

"ಯಾರು ನನ್ನನ್ನು ಯಾವ ರೀತಿಯಲ್ಲಿ ಭಜಿಸಿ ಆಶ್ರಯವನ್ನು ಬಯಸಿ ಬರುತ್ತಾರೋ, ಅವರಿಗೆ ಅದೇ ರೀತಿಯಲ್ಲಿ ನಾನು ಅನುಗ್ರಹಿಸುತ್ತೇನೆ. ಮನುಷ್ಯರು ಅನುಸರಿಸುವ ಎಲ್ಲಾ ಪ್ರಕಾರದ ಹಾದಿಗಳೂ ಕೂಡ ನನ್ನವೇ ಆಗಿದ್ದು, ಅವು ನನ್ನ ಎಡೆಗೇ ಬಂದು ಸೇರುತ್ತವೆ." (ಶ್ರೀಮದ್ ಭಗವದ್ಗೀತಾ ೭–೧೧)

ಅಷ್ಟೇ ಅಲ್ಲ, ದೇವರು ಒಬ್ಬನಾಗಿದ್ದು ಅವನಿಗೆ ವಿವಿಧ ಹೆಸರುಗಳು ಇರುವಂತೆ ಒಬ್ಬನೇ ದೇವರನ್ನು ಯೋಗಸಾಧನೆಯ ಮೂಲಕ ಕಂಡು, ಮಾತನಾಡಿ ದಿವ್ಯಾನಂದದ ಅನುಭವವನ್ನು ಹೊಂದಲು ನೆರವಾಗುವ ಸಾಧನಾಮಾರ್ಗಗಳು ಕರ್ಮ, ಭಕ್ತಿ, ಧ್ಯಾನ, ಜ್ಞಾನ ಎಂಬುದಾಗಿ ಅನೇಕವಿವೆ ಎಂಬುದು ಸನಾತನ ಹಿಂದೂಧರ್ಮದ ಉಪದೇಶವಾಗಿದೆ.

ಹೀಗೆ ಉನ್ನತ ಆಚಾರ ತತ್ತ್ವಗಳು–ವಿಚಾರ ಸೂತ್ರಗಳು ಇರುವ ಸನಾತನ ಹಿಂದೂಧರ್ಮದ ಒಂದೊಂದು ತತ್ತ್ವವನ್ನು ಕೂಡ ಬಿಡದೆ ಶ್ರೀರಾಮಕೃಷ್ಣ ಪರಮಹಂಸರು ಈ ತತ್ತ್ವವಿಚಾರಗಳು ಎಲ್ಲ ಕಾಲಕ್ಕೂ ಸತ್ಯ, ಅನುಭವವೇದ್ಯ ಎಂದು ತಮ್ಮ ಸರಳ ಸುಂದರ ಹಾಗೂ ಶಾಸ್ತ್ರ ಸಮ್ಮತವಾದ ಉಪದೇಶಗಳ ಮೂಲಕ ನಿಖರವಾಗಿ ಹೇಳಿರುತ್ತಾರೆ.

## ಶ್ರೀರಾಮಕೃಷ್ಣರ ಆಧ್ಯಾತ್ಮಿಕ ವಿಕಾಸ

ಶ್ರೀರಾಮಕೃಷ್ಣರು ಆಗ ತಾನೇ ನೂತನವಾಗಿ ನಿರ್ಮಾಣ ಗೊಂಡಿದ್ದ ದಕ್ಷಿಣೇಶ್ವರ ಮಹಾಕಾಳಿ ದೇಗುಲದಲ್ಲಿ ಸ್ವಲ್ಪ ಕಾಲ ಅರ್ಚಕರಾಗಿ ತಮ್ಮ ಜೀವನವನ್ನು ನಡೆಸಿದರು. ಅತ್ಯಂತ ವ್ಯಾಕುಲ ಚಿತ್ತದಿಂದ ಕೂಡಿ ಭಗವಂತನ ಸಾಕ್ಷಾತ್ಕಾರಕ್ಕೆ ಭಕ್ತಿಪೂರ್ವಕವಾಗಿ ಸಾಧನೆಗೈದ ಶ್ರೀರಾಮಕೃಷ್ಣ ಪರಮಹಂಸರು ದಕ್ಷಿಣೇಶ್ವರದ ಭವತಾರಿಣಿ ಶ್ರೀಕಾಳಿಕಾ ದೇವಿಯ ಅನುಗ್ರಹದಿಂದ ಆಕೆಯ ದಿವ್ಯ ದರ್ಶನ ವನ್ನು ಹೊಂದಿ, ಯೋಗಸಿದ್ಧ ಮಹಾಪುರುಷರಾದರು. ದಕ್ಷಿಣೇಶ್ವರ ದೇಗುಲದಲ್ಲಿನ ದೇವಿ ಕಾಳಿಕಾಂಬೆಯ ಮೂರ್ತಿಯು, ಭಕ್ತ ಮಹಾಯೋಗಿ ಶ್ರೀರಾಮಕೃಷ್ಣರ ಪಾಲಿಗೆ ನಿತ್ಯಜೀವಂತ ಜಗನ್ಮಾತೆಯಾಗಿ ಕಂಗೊಳಿಸಿತು. ಆಧ್ಯಾತ್ಮಿಕ ಜೀವನದ ವಿವಿಧ ಹಂತಗಳನ್ನು ಆಕೆಯ ಕೃಪೆಯಿಂದ ಹಾದು ಗುರಿ ಮುಟ್ಟಿದ ಅವರಿಗೆ ಶ್ರೀಕಾಳಿಕಾದೇವಿಯೇ ಮೊದಲ ಗುರುವಾಗಿ, ಮಾರ್ಗ ದರ್ಶನ ಮಾಡಿ ಅನುಗ್ರಹಿಸಿದಳು. ಮುಂದೆ ಹಿಂದೂಧರ್ಮದಲ್ಲಿನ ಶೈವ, ವೈಷ್ಣವ ಇತ್ಯಾದಿ ಅನೇಕ ಒಳಪಂಥಗಳ ಸಾಧನೆಯನ್ನು ಶ್ರೀರಾಮಕೃಷ್ಣರು ಸೂಕ್ತ ಗುರುಗಳ ಮಾರ್ಗದರ್ಶನದಲ್ಲಿ ಮಾಡಿ ಗುರಿ ಸೇರಿ ಕೃತಾರ್ಥರಾದರು. ಆಂಜನೇಯ, ಶ್ರೀರಾಮಚಂದ್ರ, ಸೀತಾಮಾತೆ, ರಾಧಾ, ಕೃಷ್ಣ ಎಂಬಿತ್ಯಾದಿಯಾಗಿ ವಿವಿಧ ದೇವತಾ ಸ್ವರೂಪಗಳ ದರ್ಶನಲಾಭವನ್ನು ಭಕ್ತಿಸಾಧನೆಯ ಮೂಲಕ ಶ್ರೀರಾಮಕೃಷ್ಣರು ಪಡೆದರು. ಹಾಗೆಯೇ ಹಿಂದೂಧರ್ಮದ ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಎಂಬ ಪಂಥಗಳಲ್ಲಿ ಮೊದಲ ಎರಡು ಹಂತಗಳನ್ನು ಹಾದು ಕೊನೆಯದಾದ ಅದ್ವೈತ ವೇದಾಂತ ದರ್ಶನದ ಸಿದ್ಧಿಗಾಗಿ ತೋತಾಪುರಿ ಮಹಾಸ್ವಾಮಿಗಳ ಶಿಷ್ಯರಾಗಿ ಸಾಧನೆಯನ್ನು ಮಾಡಿ, ಸಿದ್ಧಿಯನ್ನು ಹೊಂದಿ, ದಿವ್ಯಾನುಭವ ಸಂಪನ್ನರಾದರು.

ಇಷ್ಟೇ ಅಲ್ಲ, ಕ್ರೈಸ್ತ, ಮುಸಲ್ಮಾನ, ಬೌದ್ಧ, ಜೈನ, ಸಿಖ್ ಪಂಥಗಳ ತತ್ತ್ವವಿಚಾರಗಳನ್ನೂ ಅನುಸರಿಸಿ ಸೂಕ್ತವಾದ ರೀತಿಯಲ್ಲಿ ಅನುಷ್ಠಾನ ಮಾಡಿ, ಸಾಕ್ಷಾತ್ಕಾರವನ್ನು ಹೊಂದಿದ ಶ್ರೀರಾಮಕೃಷ್ಣ ಪರಮ ಹಂಸರು ಎಲ್ಲ ಧರ್ಮದ ಹಾದಿಗಳೂ ಸತ್ಯ, ಎಲ್ಲದರ ಗುರಿಯೂ ಏಕದೇವನ ಸಾಕ್ಷಾತ್ಕಾರ ಮಾತ್ರ ಎಂಬ ಧರ್ಮಸತ್ಯ ಹಾಗೂ ಧರ್ಮಸಮನ್ವಯದ ಪುರಾತನ ಪರಂಪರೆಯುಳ್ಳ ಸನಾತನ ಹಿಂದೂಧರ್ಮದ ಚಿರಂತನ ಸತ್ಯವನ್ನು ಸ್ವಾನುಭವದ ನೆಲೆಯಿಂದ ಕಂಡುಕೊಂಡು ಅದನ್ನು ವ್ಯಕ್ತಗೊಳಿಸಿ ದೃಢೀಕರಿಸಿದರು. ಶ್ರೀರಾಮಕೃಷ್ಣ ಪರಮಹಂಸರ ಅನುಪಮ ಹಾಗೂ ಭವ್ಯವಾದ ಆಧ್ಯಾತ್ಮಿಕ ಬದುಕು ಸುಪ್ರಸಿದ್ಧವಾದ 'ಶ್ರೀರಾಮಕೃಷ್ಣ ಲೀಲಾ ಪ್ರಸಂಗ' ಎಂಬ ಬೃಹತ್ ಗ್ರಂಥದಲ್ಲಿ ವರ್ಣಿತವಾಗಿದ್ದರೆ, ಸಮಸ್ತ ವೇದ-ವೇದಾಂತಗಳ ಸಾರಸಂಗ್ರಹದಂತಿರುವ 'ಶ್ರೀರಾಮಕೃಷ್ಣ ವಚನ ವೇದ' ಎಂಬ ಮಹದ್ಗ್ರಂಥದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಸಮಗ್ರ ಉಪದೇಶ ಸಂಗ್ರಹವಿದ್ದು, ಈ ಎರಡೂ ಗ್ರಂಥಗಳು ನವಯುಗದ ಮಹಾನ್ ಆಧ್ಯಾತ್ಮಿಕ ಚಿಲುಮೆಗಳಾಗಿವೆ.

ಶ್ರೀರಾಮಕೃಷ್ಣ ಪರಮಹಂಸರ ದಿವ್ಯಾವತಾರ ಲೀಲಾವೈಭವದ ಕಾಲದಲ್ಲಿ ಯುವ ಪೀಳಿಗೆಯ ಪ್ರತಿನಿಧಿಯಂತೆ ಇದ್ದ ಕೊಲ್ಕತಾದ ಪದವೀಧರ ವಿದ್ಯಾವಂತ ಉತ್ಸಾಹಿ ನವತರುಣನಾಗಿದ್ದ ನರೇಂದ್ರ ನಾಥ ದತ್ತನು ದಕ್ಷಿಣೇಶ್ವರದ ದೇವಮಾನವರೆಂದು ವಿಖ್ಯಾತರಾಗಿದ್ದ ಶ್ರೀರಾಮಕೃಷ್ಣರ ಬಳಿ ಸಾರಿ "ದೇವರು ಇದ್ದಾನೆಯೇ? ನೀವು ದೇವರನ್ನು ಕಂಡಿದ್ದೀರಾ?" ಎಂದು ವಿನಯದಿಂದ ಕೇಳುತ್ತಾನೆ. ಅದಕ್ಕೆ ಮಂದಸ್ಮಿತರಾಗಿ ಶ್ರೀರಾಮಕೃಷ್ಣರು, "ದೇವರನ್ನು ಕಂಡಿರು ವುದು ಹೌದಾಗಿರುವುದಲ್ಲದೆ ಅವನೊಡನೆ ಮಾತನಾಡಿರುತ್ತೇನೆ. ದೇವರನ್ನು ನಿನಗೂ ಕಾಣಿಸಬಲ್ಲೆ" ಎಂಬುದಾಗಿ ಆಶ್ವಾಸನೆಯ ಧ್ವನಿಯಲ್ಲಿ ಪ್ರೀತಿಪೂರ್ವಕವಾಗಿ ಹೇಳುತ್ತಾರೆ. ಅದರಂತೆ ಮುಂದೆ ಆ ನವಯುವಕ ನರೇಂದ್ರನಾಥನು ಶ್ರೀರಾಮಕೃಷ್ಣರ ಶಿಷ್ಯಾಗ್ರಣಿ ಯಾಗಿ ಭಗವತ್ಸಾಕ್ಷಾತ್ಕಾರ ಹೊಂದಿ 'ಸ್ವಾಮಿ ವಿವೇಕಾನಂದ' ಎಂಬ ಅಭಿಧಾನದಿಂದ ದೇಶವಿದೇಶಗಳಲ್ಲಿ ಧರ್ಮಕಾರ್ಯ ನಿರ್ವಹಿಸಿ ಜಗದ್ವಿಖ್ಯಾತರಾಗುತ್ತಾರೆ. ತಮ್ಮ ಗುರುದೇವರಾದ ಶ್ರೀರಾಮಕೃಷ್ಣ ಪರಮಹಂಸರು ನೀಡಿದ್ದ ಪ್ರೇರಣೆ ಹಾಗೂ ಸಲಹೆ ಯಂತೆ ೧೮೯೭ ರಲ್ಲಿ ಸ್ವಾಮಿ ವಿವೇಕಾನಂದರು, 'ರಾಮಕೃಷ್ಣ ಮಿಷನ್' ಎಂಬ ಲೋಕಕಲ್ಯಾಣ ಸೇವಾ ಸಂಸ್ಥೆಯನ್ನು ಸಂಸ್ಥಾಪಿಸಿ ದರು. ಕಲ್ಕತ್ತೆಯ ಸಮೀಪದ ಬೇಲೂರು ಮಠದ ಪಾವನ ಗಂಗಾ ನದಿಯ ತೀರದಲ್ಲಿ ತನ್ನ ಕೇಂದ್ರವನ್ನು ಹೊಂದಿರುವ ಆ ಮಹಾಸಂಸ್ಥೆಯು ವ್ಯಾಪಕವಾಗಿ ಭಾರತ ದೇಶದಾದ್ಯಂತ ಹಾಗೂ ವಿದೇಶಗಳಲ್ಲಿ ಬೆಳೆದು ತನ್ನ ನೂರಾರು ಮಂದಿ ಸಂನ್ಯಾಸಿ, ಬ್ರಹ್ಮಚಾರಿ ಹಾಗೂ ಸಹಸ್ರಾರು ಮಂದಿ ಗೃಹಸ್ಥ ಭಕ್ತ ಸದಸ್ಯರ ಮೂಲಕ, ಪೀಳಿಗೆಯಿಂದ ಪೀಳಿಗೆಗೆ ಎಂಬಂತೆ ಚ್ಯುತಿ ಇಲ್ಲದೆ ನಿರಂತರವಾಗಿ ಆಧ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಸೇವಾ ಕಾರ್ಯಮಗ್ನವಾಗಿ ಇಂದಿಗೂ ಪ್ರವರ್ಧಮಾನವಾಗಿ ಬೆಳಗುತ್ತಾ ಸಾಗುತ್ತಿರುವುದು ಸನಾತನ ಹಿಂದೂಧರ್ಮದ ಕುಂದಿಲ್ಲದ ಶಾಶ್ವತ ಶಕ್ತಿಯ ದ್ಯೋತಕವಾಗಿರುವುದಲ್ಲದೆ, ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ದಿವ್ಯಾವತಾರ ಮಹತ್ವದ ನಿತ್ಯ ಪ್ರಕಾಶವೂ ಆಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

## ಶ್ರೀರಾಮಕೃಷ್ಣರ ಬೋಧನೆಗಳ ಶಾಸ್ತ್ರಸಮ್ಮತತೆ

ಜೀವನದ ನಿಜವಾದ ಗುರಿ ಭಗವತ್ಸಾಕ್ಷಾತ್ಕಾರ ಎಂಬುದು ಶ್ರೀರಾಮಕೃಷ್ಣ ಪರಮಹಂಸರ ಉಪದೇಶದ ಪಲ್ಲವಿಯಾಗಿದ್ದು ಅವರ ಸಂದೇಶಗಳ ಸಂಪೂರ್ಣ ಸಂಗ್ರಹವಾದ 'ಶ್ರೀರಾಮಕೃಷ್ಣ ವಚನವೇದ' ದಲ್ಲಿ ಅನೇಕ ಎಡೆಗಳಲ್ಲಿ ಮಾನವನ ಜೀವನದ ಮಹೋನ್ನತ ಗುರಿ ಯಾವುದು? ಏಕೆ? ಹೇಗೆ? ಎಂಬಿತ್ಯಾದಿ ಯಾಗಿ ಬಹಳಷ್ಟು ವಿವರಗಳಿವೆ. ಹಾಗೆಯೇ, ಅಲ್ಲಲ್ಲಿ ಭಗವಂತನ ಸಾಕ್ಷಾತ್ಕಾರದಿಂದ ಮಾನವನ ಸಕಲ ದುರಿತಗಳ ನಿವಾರಣೆ ಯಾಗುತ್ತದೆ; ಸಂಸಾರ ಪಾಶದಿಂದ ಬಿಡುಗಡೆ ಉಂಟಾಗುತ್ತದೆ ಎಂಬುದಾಗಿ ಮನಮುಟ್ಟುವಂತೆ ಶ್ರೀರಾಮಕೃಷ್ಣರು ಉಪದೇಶಿಸಿರು ತ್ತಾರೆ. ಇದನ್ನೇ ಸನಾತನ ಹಿಂದೂಧರ್ಮದ ಶಾಸ್ತ್ರಗ್ರಂಥಗಳಲ್ಲಿ ಹೀಗೆ ಹೇಳಲಾಗಿದೆ:

ಯಸ್ಮಿನ್ ದ್ಯೌಃ ಪೃಥಿವೀ ಚ ಅಂತರಿಕ್ಷಮ್ ಓತಂ
ಮನಃ ಸಹ ಪ್ರಾಣೈಶ್ಚ ಸರ್ವೈಃ ।
ತಮೇವೈಕಂ ಜಾನಥ ಆತ್ಮಾನಮ್ ಅನ್ಯಾ
ವಾಚೋ ವಿಮುಂಚಥ ಅಮೃತಸ್ಯ ಏಷ ಸೇತುಃ ॥

"ದ್ಯುಲೋಕವೂ ಪೃಥಿವಿಯೂ, ಅಂತರಿಕ್ಷವೂ, ಎಲ್ಲಾ ಪ್ರಾಣ ಗಳೊಡಗೂಡಿದ ಮನಸ್ಸೂ ಯಾವನಲ್ಲಿ ಸೇರಿಕೊಂಡಿರುವುವೋ, ಆ ಆತ್ಮನೊಬ್ಬನನ್ನೇ ತಿಳಿದುಕೊಳ್ಳಿರಿ. ಬೇರೆ ಮಾತುಗಳನ್ನು ಬಿಡಿ. ಇದೇ ಸಂಸಾರ ಸಾಗರವನ್ನು ದಾಟಿ ಅಮೃತಸ್ವರೂಪಿ ಭಗವಂತ ನನ್ನು ಸೇರಲು ಇರುವ ಸೇತುವೆಯಾಗಿರುತ್ತದೆ."

–ಮುಂಡಕ ಉಪನಿಷತ್ತು (೨.೨.೫)

ಅನಾದ್ಯನಂತಂ ಕಲಿಲಸ್ಯ ಮಧ್ಯೇ
ವಿಶ್ವಸ್ಯ ಸ್ರಷ್ಟಾರಮನೇಕರೂಪಮ್ ।
ವಿಶ್ವಸ್ಯೈಕಂ ಪರಿವೇಷ್ಟಿತಾರಂ
ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ॥

"ಮಾನವನು ಗಹನಗಂಭೀರವಾದ ಸಂಸಾರದ ಮಧ್ಯದಲ್ಲಿ ಆದ್ಯಂತರಹಿತನೂ ವಿಶ್ವದ ಕರ್ತೃವೂ ಬಹುರೂಪಕನೂ ವಿಶ್ವದ ಏಕಮಾತ್ರ ವ್ಯಾಪಕನೂ ಆದ ಪರಮಾತ್ಮನನ್ನು ಅರಿತುಕೊಂಡಾಗ ಅವಿದ್ಯೆಯೇ ಮೊದಲಾದ ಸರ್ವಪಾಶಗಳಿಂದಲೂ ಮುಕ್ತನಾಗು ತ್ತಾನೆ." –ಶ್ವೇತಾಶ್ವತರೋಪನಿಷತ್ (೫.೧೩)

ಶ್ರೀರಾಮಕೃಷ್ಣ ಪರಮಹಂಸರು ಸನಾತನ ಹಿಂದೂಧರ್ಮದ ಉಜ್ವಲ ಆದರ್ಶ ಮೂರ್ತಿ, ಸನಾತನ ಧರ್ಮದ ಪುನರುದ್ಧಾರ ಕ್ಕಾಗಿ ಭುವಿಯಲ್ಲಿ ಅವತರಿಸಿ ಬೆಳಗಿದ ನವಯುಗದವತಾರ ಭಗವತ್ಸ್ವರೂಪಿ ಭಗವಂತ ಎಂಬುದು ಅವರ ಪ್ರತಿಯೊಂದು

ನಡೆ-ನುಡಿಗಳಿಂದ ವ್ಯಕ್ತವಾಗಿದ್ದು, ಅಂದಿನಂತೆ ಇಂದಿಗೂ ಅದು ಭಕ್ತಿಸಂಪನ್ನರಾದ ಸಜ್ಜನರಿಗೆಲ್ಲ ಅಂತರಂಗದಲ್ಲಿ ಕಂಡುಬರುವ ಆಧ್ಯಾತ್ಮಿಕ ಸತ್ಯವಾಗಿರುತ್ತದೆ. ಶ್ರೀರಾಮಕೃಷ್ಣರ ಜೀವನ ಹಾಗೂ ಸಂದೇಶಗಳೆಲ್ಲ ಸನಾತನ ಧರ್ಮದ ಸಾರ್ವಕಾಲಿಕ ಮೌಲ್ಯ ಹಾಗೂ ಸತ್ಯದ ಮರುಘೋಷಣೆ ಹಾಗೂ ಸಂಸ್ಥಾಪನೆಗಳೇ ಆಗಿರುತ್ತವೆ. ಶ್ರೀರಾಮಕೃಷ್ಣ ಪರಮಹಂಸರು ದೇವರು ಇದ್ದಾನೆ ಎಂದು ಹೇಳಿದಂತೆ, ದೇವರನ್ನು ಕಾಣಲೂ ಸಾಧ್ಯ ಎಂದಿದ್ದಾರೆ. ದೇವರನ್ನು ಕಾಣಲು ಸಾಧ್ಯ ಎಂಬುದಾಗಿ ಹೇಳಿದ್ದರಿಂದ ದೇವರು ಎಂದರೆ ಬರೇ ಬಾಯಿಮಾತಿನ ವಿಚಾರವಲ್ಲ, ಅವನನ್ನು ಕಂಡು ಅವನ ದಿವ್ಯತೆಯ ವೈಭವವನ್ನು ಅನುಭವಿಸಬಹುದು ಎಂಬ ಭರವಸೆ ಲಭಿಸಿದಂತಾಯಿತು. ಇದರಿಂದ ಸಾರ್ವಕಾಲಿಕ ದಿವ್ಯಸತ್ಯವನ್ನು ಸ್ಪಷ್ಟಪಡಿಸಿ ತಿಳಿಸಿದಂತಾಗುತ್ತದೆ. ಇಷ್ಟೇ ಅಲ್ಲ. ಶ್ರೀರಾಮಕೃಷ್ಣರು ದೇವರನ್ನು ನಾನು ಕಂಡಿದ್ದೇನೆ ಮಾತ್ರವಲ್ಲ, ಅವನೊಡನೆ ನಾನು ಮಾತನಾಡಿದ್ದೇನೆ ಎಂದೂ ಹೇಳಿರುತ್ತಾರೆ. ಇದರಿಂದ ಸತ್ಯ ವಿಚಾರವು ಶಾಸ್ತ್ರಪ್ರಕಾರವಾಗಿ ಅಂದರೆ ವಿಚಾರ, ವಿಚಾರದ ಕುರಿತು ಸ್ಪಷ್ಟನೆ ಹಾಗೂ ವಿಚಾರದ ಸಾಕ್ಷಾತ್ಕಾರ ಸಾಧ್ಯ ಎಂಬುದರ ಬಗ್ಗೆ ಭರವಸೆ ಮತ್ತು ಜೀವನಕ್ಕೆ ಒಂದು ಆದರ್ಶ ದೊರಕಿದಂತಾಯಿತು. ಈ ಸಂಬಂಧವಾಗಿ ಶ್ರೀರಾಮಕೃಷ್ಣರ ನೇರವಾದ ದಿವ್ಯ ನುಡಿಗಳು ಹಾಗೂ ತತ್ಸಂಬಂಧವಾದ ಸನಾತನ ಹಿಂದೂಧರ್ಮದ ಪ್ರಾಚೀನ ವೈದಿಕ ವಾಙ್ಮಯದಲ್ಲಿ ಕಂಡುಬರುವ ಋಷಿವಾಕ್ಯಗಳು ಇಂತಿವೆ:

**"ಭಗವಂತ ನನ್ನೊಡನೆ ಮಾತನಾಡಿದ, ನನಗೆ ದೊರತದ್ದು ಕೇವಲ ಆತನ ದರ್ಶನ ಮಾತ್ರವೆ ಅಲ್ಲ; ಆತ ನಿಜವಾಗಿಯೂ ನನ್ನೊಡನೆ ಮಾತನಾಡಿದ. ನಾನು ಆಲದ ಮರದ ಕೆಳಗೆ ಇದ್ದಾಗ ಆತ ಗಂಗೆಯಿಂದ ಎದ್ದು ಬಂದ. ಬಳಿಕ ನಾವು ಎಷ್ಟೊಂದು ನಗಾಡಿದೆವು ಏನು ಕತೆ! ನನ್ನೊಡನೆ ತಮಾಷೆ ಮಾಡುತ್ತಾ ನನ್ನ ಬೆರಳುಗಳ ನೆಟಿಕೆ ತೆಗೆದ. ಬಳಿಕ ಮಾತುಕತೆಯಾಡಿದ. ಹೌದು, ನನ್ನೊಡನೆ ಮಾತುಕತೆಯಾಡಿದ!"**
(ಶ್ರೀರಾಮಕೃಷ್ಣ ವಚನವೇದ, ಉತ್ತರಾರ್ಧ, ಪುಟ ೩೭೮, ಸಂಭಾಷಣೆಯ ದಿನಾಂಕ: ೯.೮.೧೮೮೪)

**"ಭಗವಂತನ ದರ್ಶನ ದೊರತರೆ ಮುಕ್ತಿ ದೊರೆತುಬಿಡುತ್ತದೆ."**
(ಶ್ರೀರಾಮಕೃಷ್ಣ ವಚನವೇದ, ಉತ್ತರಾರ್ಧ, ಪುಟ ೧೫೫, ಸಂಭಾಷಣೆಯ ದಿನಾಂಕ: ೬. ೧೨. ೧೮೮೪)

ವೇದಾಹಮೇತಂ ಪುರುಷಂ ಮಹಾಂತ-
ಮಾದಿತ್ಯವರ್ಣಂ ತಮಸಃ ಪರಸ್ತಾತ್ ।
ತಮೇವ ವಿದಿತ್ವಾಽತಿ ಮೃತ್ಯುಮೇತಿ
ನಾನ್ಯಃ ಪಂಥಾ ವಿದ್ಯತೇಽಯನಾಯ ॥

"ಅಜ್ಞಾನವೆಂಬ ಕತ್ತಲಿನಿಂದ ಆಚೆಗೆ ಇರುವ ಸೂರ್ಯ ಸದೃಶವಾದ ದಿವ್ಯಜ್ಯೋತಿ ಸ್ವರೂಪನೂ ಮಹಾಮಹಿಮನೂ ಆದ ಈ ಪುರುಷನನ್ನು (ಪರಮಾತ್ಮನನ್ನು) ನಾನು ಅರಿತಿರುತ್ತೇನೆ. ಅವನನ್ನು ಅರಿತುಕೊಂಡ ಮನುಷ್ಯನು ಮೃತ್ಯುವನ್ನು ದಾಟುತ್ತಾನೆ. ಪರಮಾತ್ಮನನ್ನು ಹೊಂದಲು ಇದಕ್ಕಿಂತ ಬೇರೆ ಮಾರ್ಗವಿಲ್ಲ."
– ಶ್ವೇತಾಶ್ವತರ ಉಪನಿಷತ್ತು (೩:೮)

**ಕರುಣಾಮಯನಾದ ಭಗವಂತನು ಹಿಂದಿನ ಎಲ್ಲ ಯುಗಗಳಿಗಿಂತಲೂ ಹೆಚ್ಚು ಪೂರ್ಣರೂಪದಲ್ಲಿ ಈಗ ಅವತರಿಸಿರುವನು. ಎಲ್ಲ ಆಧ್ಯಾತ್ಮಿಕ ಭಾವಗಳನ್ನು ಪ್ರಕಾಶಪಡಿಸುತ್ತ, ಸರ್ವ ವಿದ್ಯೆಗಳಿಗೆ ಸಹಾಯ ಮಾಡುತ್ತ, ಸಮಾಜದ ಸರ್ವಾಂಗೀಣ ಪ್ರಗತಿಗೆ ಆಸ್ಪದ ಮಾಡಿರುವನು.**

**ಆದ್ದರಿಂದ ಈ ಮಹಾಯುಗದ ಅರುಣೋದಯದಲ್ಲಿ ಸರ್ವಭಾವಗಳ ಸಮನ್ವಯ ಪ್ರಚಾರವಾಗುತ್ತಿದೆ. ಸನಾತನ ಶಾಸ್ತ್ರದಲ್ಲಿ ಮತ್ತು ಧರ್ಮದಲ್ಲಿ ಈ ಅಸೀಮ ಅನಂತ ಭಾವಗಳು ಇದ್ದರೂ ಇಷ್ಟು ಕಾಲವೂ ಆವರಣದಿಂದ ಮುಚ್ಚಲ್ಪಟ್ಟಿದ್ದವು. ಈಗ ಮತ್ತೆ ಕಂಡುಹಿಡಿಯಲ್ಪಟ್ಟು ಅವು ಉಚ್ಚ ಸ್ವರದಲ್ಲಿ ಸಮಾಜದ ಮುಂದೆ ಘೋಷಿಸಲ್ಪಡುತ್ತಿವೆ.**

**ಈ ನವಯುಗ ಧರ್ಮವು ಇಡೀ ಜಗತ್ತಿನ, ವಿಶೇಷವಾಗಿ ಭಾರತದ ಕಲ್ಯಾಣಕ್ಕೆ ತಳಹದಿಯಾಗಿರುವುದು. ಈ ನವಯುಗ ಧರ್ಮಪ್ರವರ್ತಕರಾದ ಶ್ರೀರಾಮಕೃಷ್ಣರು ಹಿಂದಿನ ಎಲ್ಲ ಧರ್ಮ ಪ್ರವರ್ತಕರ ಸುಸಂಸ್ಕೃತ ಆವಿರ್ಭಾವ. ಎಲೈ, ಮಾನವನೇ, ಇದರಲ್ಲಿ ವಿಶ್ವಾಸವಿರಿಸು, ಇದನ್ನು ಗ್ರಹಿಸು!**

**–ಸ್ವಾಮಿ ವಿವೇಕಾನಂದ**

ಈ ರೀತಿ, ಸನಾತನ ಹಿಂದೂಧರ್ಮದ ತತ್ತ್ವ ಆದರ್ಶಗಳ ಜ್ವಲಂತ ಸಾಕಾರ ಮೂರ್ತಿಯಾದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ನುಡಿಗಳಲ್ಲಿ ಆತ್ಮಾನಂದದ ದಿವ್ಯ ಶಕ್ತಿ ಇದೆ, ಆತ್ಮೋನ್ನತಿಗೆ ಪ್ರೇರಣೆ ಇದೆ, ಆತ್ಮಾನಂದ ಪ್ರಾಪ್ತಿಯ ಭರವಸೆ ಇದೆ, ಮನುಕುಲಕ್ಕೆ ಪ್ರೇಮ-ಶಾಂತಿ-ಸಹಕಾರ ಹಾಗೂ ಸೌಖ್ಯಗಳ ಆಶ್ವಾಸನೆ ಇದೆ. ಅದರಂತೆ ಶ್ರೀರಾಮಕೃಷ್ಣ ಪರಮಹಂಸರು ಸನಾತನ ಹಿಂದೂಧರ್ಮದ ಬಗೆಗೆ ಹೇಳಿದ ಕೆಳಗಿನ ಮಹತ್ವದ ಮಾತುಗಳು ಹಿಂದೂಧರ್ಮಾಭಿಮಾನಿಗಳೆಲ್ಲರಿಗೂ ಸ್ಫೂರ್ತಿ, ಭರವಸೆ ಹಾಗೂ ರಕ್ಷಣೆಯ ಶಕ್ತಿಸಂದೇಶವಾಗಿರುತ್ತದೆ:

**"ಹಿಂದೂಧರ್ಮವೇ ಸನಾತನ ಧರ್ಮ... ಹಿಂದೂಧರ್ಮವು ಎಂದೆಂದಿನಿಂದಲೂ ಬದುಕಿ ಬಂದಿದೆ. ಮುಂದೆಯೂ ಎಂದೆಂದಿಗೂ ಬದುಕಿ ಬಾಳುತ್ತದೆ."** (ಶ್ರೀರಾಮಕೃಷ್ಣ ವಚನವೇದ, ಉತ್ತರಾರ್ಧ, ಪುಟ ೧೯೯, ಸಂಭಾಷಣೆಯ ದಿನಾಂಕ: ೨೦.೧೦.೧೮೮೪)

ಹೀಗೆ ಸನಾತನ ಧರ್ಮ ಹಾಗೂ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು ಅವಿನಾಭಾವ ಸಂಬಂಧ ಹೊಂದಿದ್ದಾರೆ; ಇಂದಿಗೂ ಅವರು ನಿಜವಾದ ಅರ್ಥದಲ್ಲಿ ದೇಶವಿದೇಶಗಳಲ್ಲಿ ಭಕ್ತಕೋಟಿಯ ಆರಾಧ್ಯ ದೇವರಾಗಿ, ಲೋಕಕ್ಕೆ ಧರ್ಮಾನುಗ್ರಹದ ಸುಭದ್ರ ನಂದಾದೀಪವಾಗಿ, ನಿತ್ಯವೈಭವದಿಂದ ಸರ್ವತ್ರ ಬೆಳಗುತ್ತಿದ್ದಾರೆ.